# ಮಂಗಳೂರು ಮಹಾನಗರ ಪಾಲಿಕೆ

ಲಾಲ್‌ಬಾಗ್, ಎಂ.ಜಿ ರಸ್ತೆ, ಮಂಗಳೂರು – 575 003, ಕರ್ನಾಟಕ, ಭಾರತ.

ಫೋನ್: 0824 2220313 – 18, ಫ್ಯಾಕ್ಸ್: 0824 2220310 ವೆಬ್‌ಸೈಟ್: www.mangalorecity.gov.in


## ಷರತ್ತುಗಳು

1. ಸದರಿ ಪೋಲ್‌ಕಿಯೋಸ್ಕ್‌ನ್ನು ಬಿ.ಒ.ಟಿ. ಆಧಾರದ ಮೇಲೆ ತಮ್ಮ ಸ್ವಂತಖರ್ಚಿನಿಂದ ನಿರ್ಮಿಸತಕ್ಕದ್ದು.
2. ಪೋಲ್‌ಕಿಯೋಸ್ಕ್‌ಗೆತಗಲುವ ವೆಚ್ಚ, ವಿದ್ಯುತ್ ವೆಚ್ಚ, ಭದ್ರತಾ ವೆಚ್ಚ ಹಾಗೂ ಇತರ ವೆಚ್ಚಗಳನ್ನು ತಾವೇ ಭರಿಸತಕ್ಕದ್ದು.
3. ಪೋಲ್‌ಕಿಯೋಸ್ಕ್‌ನ್ನು ಅಳವಡಿಸುವಾಗ ಅಥವಾ ನಿರ್ವಹಿಸುವಾಗ ಯಾವುದಾದರೂಅನಾಹುತ ಸಂಭವಿಸಿದಲ್ಲಿ ಅದಕ್ಕೆಗುತ್ತಿಗೆ ವಹಿಸಿಕೊಂಡ ಜಾಹೀರಾತುದಾರರೇಜವಾಬ್ದಾರರಾಗಿರುತ್ತಾರೆ. ಅಳವಡಿಸುವಾಗ ಸಾರ್ವಜನಿಕರಿಗಾಗಲೀ, ವಾಹನ ಸಂಚಾರಕ್ಕೆತೊಂದರೆ/ ಅನಾನುಕೂಲವಾಗಬಾರದು.
4. ಪೋಲ್‌ಕಿಯೋಸ್ಕ್‌ನ್ನು ಅಳವಡಿಸಲು ಅನುಮತಿ ಪಡಕೊಂಡಗುತ್ತಿಗೆ ವಹಿಸಿಕೊಂಡ ಗುತ್ತಿಗೆದಾರರು /ಜಾಹೀರಾತುದಾರರು ಮನಪಾವು ನಿಗದಿಪಡಿಸಿದ ನೆಲಬಾಡಿಗೆಯನ್ನು ಮತ್ತುಜಾಹೀರಾತುತೆರಿಗೆಯನ್ನು/ ಸೇವಾತೆರಿಗೆ/ಆರೋಗ್ಯಕರವನ್ನುಅನುಮತಿ ಪಡೆದ ದಿನಾಂಕದಿಂದ 7 ದಿನಗಳೊಳಗೆ ಪಾವತಿಸತಕ್ಕದ್ದು.
5. ಗುತ್ತಿಗೆ ವಹಿಸಿಕೊಂಡ ಗುತ್ತಿಗೆದಾರರು/ಜಾಹೀರಾತುದಾರರು ವಹಿಸಿಕೊಂಡ ಹಕ್ಕಿನ ಬಗ್ಗೆ ಶರ್ತವನ್ನೊಳ್ಳಗೊಂಡ ಕರಾರು ಪತ್ರವನ್ನುಒಪ್ಪಿಸುವುದು.
6. ವಿದ್ಯುತ್‌ಟ್ರಾನ್ಸ್‌ಫಾರ್ಮರ್‌ಅಥವಾ ವಿದ್ಯುತ್ ತಂತಿಗಳಿಂದ ಕನಿಷ್ಠ 3.5 ಮೀಟರುಗಳ ದೂರದಲ್ಲಿರಬೇಕು.
7. ಸದ್ರಿ ಪೋಲ್‌ಕಿಯೋಸ್ಕ್‌ನ್ನು ಅಳವಡಿಸುವ ಮುನ್ನ ಸದ್ರಿ ಸ್ಥಳಗಳಲ್ಲಿ ಊಖಿ, ಐಖಿ ವಿದ್ಯುತ್‌ತಂತಿ, ನೆಲದಡಿಯಲ್ಲಿ ಮುಖ್ಯ ಕೊಳವೆ, ವಿತರಣಾ ಕೊಳವೆ, ಟೆಲಿಫೋನ್ ಕೇಬಲ್ ಇರುವಕಾರಣ ಮನಪಾ ಕಾರ್ಯಪಾಲಕಇಂಜಿನಿಯರ್, ಟೆಲಿಫೋನ್ ಇಲಾಖೆ, ವಿದ್ಯುತ್‌ಇಲಾಖೆಯವರಿಂದ ನಿರಾಕ್ಷೇಪಣಾ ಪತ್ರ ಪಡೆದ ನಂತರಕಡ್ಡಾಯ ಪಡೆದುಕೊಳ್ಳುವುದು. ಪೋಲ್‌ಕಿಯೋಸ್ಕ್‌ನ್ನು ಅಳವಡಿಸುವಾಗ ಬೀದಿ ದೀಪದ ಕಂಬಗಳಿಗೆ, ಟೆಲಿಫೋನ್ ಕಂಬಗಳಿಗೆ ಹಾನಿಯುಂಟಾಗದಂತೆ ನಿಗಾ ವಹಿಸುವುದು ಹಾಗೂ ಹಾನಿಯುಂಟಾದಲ್ಲಿ ಸದ್ರಿಅನುಮತಿ ಪಡಕೊಂಡಗುತ್ತಿಗೆದಾರರೇಜವಾಬ್ದಾರನಾಗಿ ಮಾಡಲಾಗುವುದು. ಇಂತಹ

ಸಂದರ್ಭದಲ್ಲಿದೂರವಾಣಿ ಇಲಾಖೆ, ವಿದ್ಯುತ್ ಇಲಾಖೆ, ನಗರಪಾಲಿಕೆಯ ಸಂಬಂಧಪಟ್ಟವರಿಂದ ಸಲಹೆ ಪಡೆಯತಕ್ಕದ್ದು.

8. ನಗರದ ಸೌಂದರ್ಯವನ್ನು ಹೆಚ್ಚಿಸಲು ವಿದ್ಯುತ್ ದೀಪ ಕಂಬಗಳಿಗೆ ಕಾಲಕಾಲಕ್ಕೆ ಬಣ್ಣ ಬಳಿದು ಸಂಪೂರ್ಣ ನಿರ್ವಹಣೆ ಮಾಡತಕ್ಕದ್ದು.
9. ಪೋಲ್‌ಕಿಯೋಸ್ಕ್‌ನ್ನು ಅಳವಡಿಸುವಾಗ ಉತ್ತಮಅಡಿಪಾಯವನ್ನು ನಿರ್ಮಿಸತಕ್ಕದ್ದು ಹಾಗೂ ಪ್ರಾಕೃತಿಕ ವಿಕೋಪಗಳಿಗೆ ಸಿಕ್ಕಿ ಹಾಳಾಗದಂತೆ ಭದ್ರವಾಗಿ ಅಳವಡಿಸತಕ್ಕದ್ದು.
10. 3 ವರ್ಷದಅವಧಿಗೆಜಾಹೀರಾತು ಅಳವಡಿಸತಕ್ಕದ್ದು. ನಿಗದಿತಅವಧಿಯು ಮುಕ್ತಾಯಗೊಂಡ ನಂತರತೆರಿಗೆಯನ್ನು ಪರಿಷ್ಕರಿಸುವದರದಲ್ಲಿ ನೀಡುವಅಥವಾ ಮರುಟೆಂಡರು ಬಗ್ಗೆ ಮಹಾನಗರಪಾಲಿಕೆಯ ಕಾಯ್ದಿರಿಸಿಕೊಂಡಿದೆ.
11. ಪೋಲ್‌ಕಿಯೋಸ್ಕ್‌ನ್ನು ಈ ಅನುಮತಿ0ಯಲ್ಲಿ ಕಾಣಿಸಿದ ಸ್ಥಳದಲ್ಲೇ ಹಾಕತಕ್ಕದ್ದು. ಇದಕ್ಕೆತಪ್ಪಿದಲ್ಲಿಅನುಮತಿ ನೀಡಿದ ಅಳತೆ0ಯ ಫಲಕವನ್ನು ಪೂರ್ವಸೂಚನೆಇಲ್ಲದೆ ತೆಗೆ0ಯಲಾಗುವುದು ಅದರಖರ್ಚನ್ನು. ದಂಡವನ್ನುಅರ್ಜಿದಾರರಿಂದ ವಸೂಲಿ ಮಾಡಲಾಗುವುದು.
12. ಅನುಮತಿ ಪಡೆದಪೋಲ್ ಕಿಯೋಸ್ಕ್‌ಗಳನ್ನು ಮಹಾನಗರಪಾಲಿಕೆ0ಯು ಸಾರ್ವಜನಿಕ ಹಿತದೃಷ್ಟಿಯಿಂದ ತೆರವುಗೊಳಿಸಿದ್ದಲ್ಲಿ ಆ ಬಗ್ಗೆ 0ಯಾವುದೇ ಪರಿಹಾರವನ್ನು ಅನುಮತಿದಾರರಿಗೆ ಮಹಾನಗರಪಾಲಿಕೆ0ಯ ವತಿಯಿಂದ ನೀಡಲಾಗುವುದಿಲ್ಲ.
13. ಸದ್ರಿ ಪೋಲ್ ಕಿಯೋಸ್ಕ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯುವರೇ ಈ ಕಚೇರಿಯಿಂದ ಯಾವುದೇ ಆಕ್ಷೇಪಣೆಇರುವುದಿಲ್ಲ.
14. ಯಾವುದೇ ವಿಚಾರವನ್ನು ಮಂಗಳೂರು ನಗರ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬಗೆಹರಿಸಿಕೊಳ್ಳತಕ್ಕದ್ದು.
15. ಈ ಷರತ್ತನ್ನು ಮುಂದುವರಿಸುವಅಥವಾ ಮೊಟಕುಗೊಳಿಸುವ ಅಧಿಕಾರವನ್ನು ಮಾನ್ಯ ಆಯುಕ್ತರವರು ಹೊಂದಿರುತ್ತಾರೆ.
16. ಮಹಾನಗರಪಾಲಿಕೆ ವಿಧಿಸುವ ಸೂಚನೆ ನಿಯಮಗಳಿಗೆ ಬದ್ಧರಾಗಿರತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಗರಪಾಲಿಕೆ ನೀಡಿದ ಆದೇಶವನ್ನು ಹಿಂಪಡೆದುಕೊಳ್ಳಲಾಗುವುದು.
17. ಕರ್ನಾಟಕ ಪೌರ ನಿಗಮ ಕಾಯ್ದೆಯಎಲ್ಲಾ ನಿಯಮಗಳು ಅನ್ವಯಿಸುವುದು.

ಸಹಿ/-

ಆ0ಯುಕ್ತರು,

ಮಹಾನಗರಪಾಲಿಕೆ, ಮಂಗಳೂರು.